ಶ್ರೀ ಎಸ್. ಬಂಗಾರಪ್ಪ.—ಮೈಸೂರು ಮಹಾರಾಷ್ಟ್ರ ಗಡಿ ವಿವಾದ ಸಂಪೂರ್ಣವಾಗಿ ಇದುವರೆಗೂ ಇತ್ಯರ್ಥವಾಗಿಲ್ಲ, ಪಾರ್ಲಿಮೆಂಟ್ ಮುಂದೆ ಇದೆ. ಈ ಸಭೆ ಒಮ್ಮೆ ತೀರ್ಮಾನ ಮಾಡಿ ಕೇಂದ್ರಕ್ಕೆ ಕಳುಹಿಸಿಕೊಟ್ಟಿದೆ. ಮೈಸೂರು ಮಹಾರಾಷ್ಟ್ರ ಗಡಿ ವಿವಾದವನ್ನು ಕೂಡಲೆ ಇತ್ಯರ್ಥ ಮಾಡಲಿಕ್ಕಾಗಿ, ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒತ್ತಡ ತಂದು, ಅತಿ ಶೀಘ್ರವಾಗಿ ಇದನ್ನು ಇತ್ಯರ್ಥಗೊಳಿಸಬೇಕು ಎಂದು ಇತ್ತೀಚೆಗೆ ಪ್ರಯತ್ನವನ್ನು ನಡೆಸಿದೆಯೇ ? ನಡೆಸದಿದ್ದರೆ ಯಾವಾಗ ನಡೆಸುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ಶೀಘ್ರವಾಗಿ ಈಗಲೇ ಇತ್ಯರ್ಥವಾಗದೆ ಇರುವುದರಿಂದ ಆಗಿರುವ ತೊಂದರೆ ಏನು ? ನಮಗೆ ಏನೂ ಅಂಥ ತೊಂದರೆ ಕಾಣಲಿಲ್ಲ. ಪಾರ್ಲಿಮೆಂಟ್ ಮುಂದೆ ಈ ಸಮಸ್ಯೆ ಇದೆ, ವೇಳೆ ಬಂದಾಗ ತೀರ್ಮಾನ ತೆಗೆದುಕೊಳ್ಳಬಹುದು.

Sri B.B. SAYANAK.—Is it a fact that the Chief Minisers of Maharashtra and Mysore had discussed this issue last year in the month of November or December at the residence of the Chief Minister of Maharashtra and if so, what is outcome of that discussion ?

Sri D. DEVARAJ URS.—I did go to the house of the Chief Minister of Maharashtra and we had a tete-a-tete. I took lunch with the Chief Minister and two or three friends of his including the President of the Maharashtra Pradesh Congress Committee and Shri R.M Desai were present at that time. All this appeared in the press. We had only informal discussion but had no discussion on the border issue.

Relief to Victims of Fire Accidents in Shimoga District

188 **Sri A. K. ANWAR** (Bhadravathi).—

Will the Minister for Revenue be pleased to state :—

(*a*) the amount sanctioned to the victims of the fire accidents during the year 1970-71 to 1972-73 in Shimoga district (Talukwise figures may be furnished) ;

(*b*) the total number of sheds gutted due to the fire accidents in every taluk in the district ;

(*c*) the amount of compensation paid to the victims during the year 1970-71 and 1971-72 (Talukwise figures may be furnished) ;

(*d*) the number of cases pending with Government or Deputy Commissioner since the last two years in each taluk ;

(*e*) the total amount that has to be disbursed to the victims of the fire accidents in the District up to the end of 1972 ?

Sri N. HUTCHAMASTHY GOWDA (Minister for Revenue).—

(*a*), (*b*) and (*c*) *Vide* statements A, B and C are appended.

(*d*) 3.

(*e*) Rs. 1,14,020.

STATEMENT 'A'

Grant of relief to the victims of fire accidents in Shimoga District, Shimoga

Sl. No.	Name of the Taluk	The amount sanctioned to the victims of the fire accidents during the year 1970 to 1972 in Shimoga District (Talukwise figures.)		
		1970-71	1971-72	1972-73
		Rs.	Rs.	Rs.
1	Shimoga ...	4,480-00	55,949-02	33,483-00
2	Bhadravathi ...	3,830-00	16,752-00	39,855-00
3	Channagiri ...	15,435-00	31,540-00	31,000-00
4	Honnali ...	8,740-00	26,328-00	7,810-00
5	Shikaripur ...	7,075-00	15,617-00	40,092-00
6	Sorab ...	10,367-00	45,005-00	25,957-50
7	Sagar ...	3,095-00	20,375-00	11,961-00
8	Hosanagar ...	1,175-00	6 000-00	2,650-00
9	Thirthahalli ...	4,327-00	7,285-00	7,875-00
	Total ...	58,524-00	2,24,851-02	2,00,683-50

STATEMENT 'B'

Sl. No.	Name of the Taluk	The total number of Sheds gutted due to the fire accidents in every Taluk in the District.		
		1970-71	1971-72	1972-73
1	Shimoga ...	28	157	81
2	Bhadravathi ...	64	198	206
3	Channagiri ...	50	218	23
4	Honnali ...	43	70	45
5	Shikaripur ...	51	42	52
6	Sorab ...	116	70	78
7	Sagar ...	22	62	35
8	Hosanagar ...	17	21	8
9	Thirthahalli ...	19	23	15
	Total: ...	410	861	543

(SRI N. PUTCHAMASTHI GOWDA)

STATEMENT 'C'

Sl. No.	Name of the Taluk	The amount of compensation paid to the victims during the years 1970-71 and 1971-72 (Talukwise figures)		The No. of cases pending with the Govt. or D.C. since the last two years in each Taluk.
		1970-71	1971-72	
		Rs.	Rs.	
1	Shimoga ...	4,480-00	55,949-00	...
2	Bhadravathi ..	5,430-00	17,772-00	...
3	Channagiri ...	15,435-00	31,540-00	...
4	Honnali ...	8,740-00	26 328-00	2
5	Shikaripur ...	7,075-00	15,617-00	...
6	Sorab ...	10,367-00	45,005-00	...
7	Sagar ...	3,095-00	20,375-00	1
8	Hosanagar ...	1,175-00	6,000-00	...
9	Thirthahalli ...	4,327-00	7,285-00	...
	Total ...	60,124-00	2,25,871-00	3

Sl. No.	Name of the Taluk	The total amount that has to be disbursed to the victims of the fire accidents in the Dist. up to the end of 1972.	Remarks
		Rs.	
1	Shimoga ...	21,141-00	
2	Bhadravathi ...	34,526-0	
3	Channagiri ...	Nil	
4	Honnali ...	4,440-00	A. F. cases relating to Kuruva, Hosahalli villages are pending with the Divisional Commr., Bangalore.
5	Shikaripur ...	16,453-00	
6	Sorab ...	14,935-00	Orders issued.
7	Sagar ...	12,000-00	A. F. at Melanagolagodu is pending with the Divisional Commr
8	Hosanagar ...	2,650-00	
9	Thirthahalli ...	7,875-00	...
	Total :	1,140,20-00	...

ಶ್ರೀ ಅಬ್ದುರ್ ಖುದ್ದೂಸ್ ಅನ್ಸರ್.—ಭದ್ರಾವತಿಯಲ್ಲಿ 1970ನೇ ಇಸವಿಯಲ್ಲಿ ಐದು ಸಾವಿರ ರೂಪಾಯಿ, 1972ನೇ ಇಸವಿಯಲ್ಲಿ 17 ಸಾವಿರ ರೂಪಾಯಿಗಳನ್ನು ಆಕಸ್ಮಿಕಗಳಿಗೆ ಈಡಾದವರಿಗೆ ಪರಿಹಾರವೆಂದು ಎರಡು ವರ್ಷಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಹಣ ಕೊಟ್ಟಿದ್ದೀರಿ, ಇದು ಡಿಸ್ಕ್ರಿಮಿನೇಷನ್ ಆಗುವುದಿಲ್ಲವೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಡಿಸ್ಕ್ರಿಮಿನೇಷನ್ ಅಲ್ಲ. ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ನಷ್ಟವಾಗಿದೆ, ಎಷ್ಟೆಷ್ಟು ಕೇಸುಗಳಲ್ಲಿ ಆಗಿದೆ ಎಂದು ತಿಳಿದು ಅದಕ್ಕೆ ತಕ್ಕಂತೆ ಹಣ ಕೊಟ್ಟಿದ್ದೇವೆ. ಕೊಡಬೇಕಾಗಿ ಉಳಿದಿರುವುದು ಒಂದು ಲಕ್ಷದ ನಲವತ್ತು ಸಾವಿರ ರೂಪಾಯಿ ಮಾತ್ರ. ಡಿವಿಷನಲ್ ಕಮಿಷನರ್ ಅವರಿಗೆ ಆಗಲೇ ಹಣವನ್ನು ಅರಾಟ್‌ಮಾಡಿದೆ. ಡಿವಿಷನಲ್ ಕಮಿಷನರ್ ಅವರು ಯಾವ ಯಾವ ತಾಲ್ಲೂಕಿನವರಿಗೆ ಎಷ್ಟೆಷ್ಟು ಹಣ ಕೊಡಬೇಕು ಎಂದು ಮೊನ್ನೆ ತಾನೆ ಅರಾಟ್ ಮಾಡಿದ್ದಾರೆ. ಉಳಿದಿದ್ದು ನಾಲು ಹಳೆಯ ಕೇಸುಗಳು, 14-10-1970ರಲ್ಲಿ ಹೊನ್ನಾಳಿ ತಾಲ್ಲೂಕಿನ ಒಂದು 22 ಕುಟುಂಬಗಳಿಗೆ 30,515 ರೂಪಾಯಿ ನಷ್ಟವಾಗಿದೆ. ಅದಕ್ಕೆ 7400 ರೂಪಾಯಿ ಕ್ಯಾಷ್ ರಿಲೀಫ್ ಕೊಡಬೇಕು ಮತ್ತು ಮೆಟೀರಿಯಲ್ಸ್ 1400 ರೂಪಾಯಿದು ಕೊಡಬೇಕು ಎಂದು ಇದೆ. ಇನ್ನೊಂದು ಕೇಸು ಒಕ್ಕಲಕೊಪ್ಪ, ಅದು ಸೊರಬ ತಾಲ್ಲೂಕಿನದು. 20-1-1971ರಲ್ಲಿ ಆಗಿದ್ದು. ಅದಕ್ಕೆ 15ನೂವಿರ ಕೊಡಬೇಕು. ನಮ್ಮ ಸರ್ಕಾರ ಬಂದ ಕೂಡಲೆ 10,800 ರೂಪಾಯಿಗಳನ್ನು 17-2-1973ರಲ್ಲಿ ಮಂಜೂರು ಮಾಡಿ ಕಳುಹಿಸಿಕೊಡಲಾಗಿದೆ. ಎಲ್ಲೆಲ್ಲಿ ಬಾಕಿ ಉಳಿದಿವೆ ಎಂದು ನಮ್ಮ ಗಮನಕ್ಕೆ ಬಂದಾಗ ಕ್ರಮ ಕೈಗೊಳ್ಳಬಹುದು.

ಶ್ರೀ ಎಸ್. ಬಂಗಾರಪ್ಪ.—15 ಸಾವಿರ ರೂಪಾಯಿ ಕ್ಯಾಷ್ 10800 ರೂಪಾಯಿಗಳ ಮೆಟೀರಿಯಲ್ಸ್ ಕೊಡಬೇಕು ಎಂದು ಆಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—15672 ರೂಪಾಯಿ ಕ್ಯಾಷ್, 10,800 ರೂಪಾಯಿ ಮೆಟೀರಿಯಲ್ ಕೊಡಬೇಕೆಂದು ಆರ್ಡರ್ ಪಾಸ್‌ಮಾಡಿ, ತೀರ್ಮಾನ ಮಾಡಿದೆ. ಇನ್ನೊಂದು ಹೊಸಹಳ್ಳಿ ವಿಲೇಜಿಗೆ 21-2-1970ರಲ್ಲಿ ಆಕಸ್ಮಿಕವಾಗಿರುವುದು, ಒಂದು ಕುಟುಂಬಕ್ಕೆ, ಅದನ್ನು ಕೂಡ ಈಗ ಮುಂಜೂರು ಮಾಡಿದೆ. ಇನ್ನೊಂದು ಗೋಳುಗೋಡು ಸಾಗರ ತಾಲ್ಲೂಕಿನದು, ಇದು 1967ನೇ ಇಸವಿಯ ಕೇಸು. ಇಷ್ಟು ನಾಲ್ಕು ಕೇಸುಗಳು ಬಾಕಿ ಉಳಿದಿವೆ, ಎರಡು ಕೇಸುಗಳು ಫೈನಲ್ ಆಗಿ, ಡೀಟೆಲ್ಸ್ ಕಳುಹಿಸಿ ಎಂದು ಡಿವಿಷನರ್ ಕಮಿಷನರಿಗೆ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದೆ. ಗೋಳುಗೋಡಿನ ಒಂದೇ ಕುಟುಂಬಕ್ಕೆ ಪರಿಹಾರ ಕೊಡಬೇಕಾಗಿರುವುದು. ಮಾನ್ಯ ಸದಸ್ಯರಿಗೆ ಅದು ಗೊತ್ತಿರಬಹುದು. ಸರ್ಕಾರಿ ಆಜ್ಞೆ ಪ್ರಕಾರ ಪರಮಾವಧಿ ಹಣ ಕೊಡುವುದು ಐದು ನೂರು ರೂಪಾಯಿ ಮಾತ್ರ. ಉಳಿದಿದ್ದುನ್ನು ಬಡ್ಡಿ ಇಲ್ಲದೆ ಹಣವನ್ನು ಕೊಡಬೇಕು. ಉಚಿತವಾಗಿ ಕೊಡುವುದು ಐದು ನೂರು ರೂಪಾಯಿ ಮಾತ್ರ. ಹಳೆಯ ಕೇಸುಗಳು ಲೆಕ್ಕ ಗೊತ್ತಾದ ಕೂಡಲೆ, ಎರಡಕ್ಕೆ ಹಣವನ್ನು ಮುಂಜೂರು ಮಾಡಿದ್ದೇವೆ. ಇನ್ನು ಎರಡಕ್ಕೆ ಡೀಟೇರ್ಸ್ ತರಿಸಿಕೊಡುವುದಕ್ಕೆ ಹೇಳಿದ್ದೇವೆ ಇಷ್ಟರಲ್ಲಿ ಮಾಡುತ್ತೇವೆ.

ಶ್ರೀ ಅಬ್ದುಲ್ ಖುದ್ದೂಸ್ ಅನ್ಸರ್.—ಶಿವಮೊಗ್ಗದಲ್ಲಿ 4ಸಾವಿರ ರೂಪಾಯಿ ಕೊಡಬೇಕಾ. ಅದನ್ನು ಕೊಡುವುದಕ್ಕೆ ಎಷ್ಟು ದಿವಸ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾ ಗೌಡ.—ಡಿವಿಷನಲ್ ಕಮಿಷನರ್ ಅವರು ಹಣ ಮುಂಜೂರು ಮಾಡಿ ತಾಲ್ಲೂಕುಗಳಿಗೆ ಹಂಚಿದ್ದಾರೆ, ಅದನ್ನು ಅವರು ಡಿಸ್ಟರ್ಸ್ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಇತ್ತೀಚೆಗೆ ಒಂದು ಲಕ್ಷ 14 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದಿರಿ, ಬಿಡುಗಡೆಯಾಗಿರತಕ್ಕ ಹಣ 5—6ತಿಂಗಳ ಹಿಂದೆ ಆಗಿರತಕ್ಕ ಘಟನೆಗಳಿಗೆ ಮಾತ್ರ ಸಾಕಾಗುತ್ತದೆ. ಈಚೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಮೂರು ಘಟನೆಗಳು ನಡೆದಿವೆ ; ಸಾಗರ ತಾಲ್ಲೂಕಿನಲ್ಲಿ 25 ಘಟನೆಗಳು ಒಂದು ತಿಂಗಳ ಈಚೆಗೆ ನಡೆದಿದೆ. ಆದ್ದರಿಂದ ಜಿಲ್ಲಾಧಿಕಾರಿಗಳ ಕೈಯಲ್ಲಿ ಇಡುವುದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೆ ಲೆಕ್ಕ ಇರುವ ಪ್ರಕಾರ 1970-71, 1972-73ನೇ ಇಸವಿಯವರೆಗೆ ಒಟ್ಟು 1814 ಮನೆಗಳಿಗೆ ನಷ್ಟವಾಗಿರತಕ್ಕದ್ದು. ಸುಮಾರು 4,86,058 ರೂಪಾಯಿಗಳನ್ನು ಕೊಡಬೇಕೆಂದು, ಸರ್ಕಾರ ನಿರ್ಣಯಿಸಿರತಕ್ಕದ್ದು. ಈಚೆಗೆ ಯಾವುದು ಆಕಸ್ಮಿಕ ಆಗಿದೆ ಎಂದು ತಿಳಿದಿಲ್ಲ ಅದರಲ್ಲಿ ಒಟ್ಟು ಒಂದು ಲಕ್ಷ 40 ಸಾವಿರ ರೂಪಾಯಿಗಳನ್ನು ಮಾತ್ರ ಸರ್ಕಾರ ಕೊಡಬೇಕಾದದು ಇದೆ. ಈಗಾಗಲೇ, ಡಿವಿಷನರ್ ಕಮಿಷನರ್ ಅವರಿಗೆ ಪೂರ್ಣ ಕೊಡುವುದಕ್ಕೆ ತಿಳಿಸಿದ್ದೇವೆ. ಹಣವನ್ನು ಮುಂಜೂರು ಮಾಡಿಕೊಟ್ಟಿದೆ, ತಾಲ್ಲೂಕು ವೈಸ್ ಡಿಸ್ಟ್ರಿಬ್ಯೂಟ್‌ಕೂಡ ಮಾಡಿದ್ದಾರೆ.

ಶ್ರೀ ಎಸ್. ಎಂ. ಶೀರನೊಳ ಚಂದ್ರಶೇಖರ್.—ತಾಲ್ಲೂಕುವಾರು ಇಂತಿಷ್ಟು ಹಣವನ್ನು ಅಲಾಟ್‌ಮಾಡಿದ್ದೇವೆಂದು ತಿಳಿಸಿದಿರಿ, ಅಸೆಂಬ್ಲಿ ಪ್ರಾರಂಭವಾಗುವ ಮೊದಲು ಶಿವಮೊಗ್ಗ ಜಿಲ್ಲಾಧಿಕಾರಿಗಳನ್ನು ಕೇಳಿದಾಗ ಅವರು ನನ್ನ ಕಡೆ ಗವರ್ನಮೆಂಟ್ ಆರ್ಡರ್ ಇಲ್ಲ, ಎಷ್ಟುಕೊಡಬೇಕು ಎನ್ನುವ ಪ್ರಾವಿಷನ್ ಇಲ್ಲ ಎಂದು ಹೇಳಿದರು, ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಿಲ್ಲಾಧಿಕಾರಿಗಳು ಗವರ್ನಮೆಂಟ್ ಆರ್ಡರ್‌ಆಗಿಲ್ಲ ಎಂದು ತಮಗೆ ಹೇಳಿರುವುದು ನನ್ನ ಗಮನಕ್ಕೆ ಬಂದಿಲ್ಲ. ಗವರ್ನಮೆಂಟ್ ಆರ್ಡರ್ 13-2-1970 ರಲ್ಲಿ ಆಗಿರತಕ್ಕದ್ದು. ಅವರಿಗೆ ಈ ವಿಷಯ ಗೊತ್ತಿದೆ ಬಂದು ನನ್ನ ಭಾವನೆ, ಒಂದು ಪಕ್ಷ ಅವರು ಕೇವಲ ಅವಿವೇಕದಿಂದ ನಿಮಗೆ ತಿಳಿಸಿದ್ದೇ ಆದರೆ, ನಾನು ತಹಸೀಲ್ದಾರರವರಿಂದ ತಿಳಿದು ಅದರಂತೆ ಹಣ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಉತ್ತರದಲ್ಲಿ ಒಂದು ಕುಟುಂಬಕ್ಕೆ ಐದು ನೂರು ರೂಪಾಯಿ ಮೇಲ್ಪಟ್ಟು ಪರಿಹಾರ ಧನವನ್ನು ಕೊಡುವುದಕ್ಕೆ ಸಾಧ್ಯವಿಲ್ಲ, ಉಳಿದಿದ್ದನ್ನು ಸಾಲದ ರೂಪದಲ್ಲಿ ಕೊಡಬೇಕು ಎಂದು ತಿಳಿಸಿದಿರಿ. ಸಾಲವನ್ನು ಮರ ಪಾವತಿ ಮಾಡುವ ಪ್ರಶ್ನೆ ಬೇರೆ, ಅದು ಮುಂದೆ ಬರುತ್ತದೆ, ಆದರೆ ಈ ಪರಿಹಾರ ಧನ ಐದುನೂರು ರೂಪಾಯಿ ಏನು ಇದೆ ಅದನ್ನು, ಕಾನೂನನ್ನು ತಿದ್ದುಪಡಿ ಮಾಡಿ ಎರಡು ಸಾವಿರ ರೂಪಾಯಿಯವರೆಗೆ ಕೊಡುತ್ತೀರಾ ?

5-30 P.M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸದ್ಯರಿಗೆ ಗೊತ್ತಿರು ಹಾಗೆ ವರ್ಷೇ ವರ್ಷೇ ಪ್ರವಾಹ ದಿಂದ ಬೆಂಕಿಯಿಂದ ದೊಡ್ಡ ಬಿರುಗಾಳಿಯಿಂದ, ಆಣೆಕಲ್ಲಿಂದ ಈ ತರಹ ಅನೇಕ ನಷ್ಟಗಳು ಆಗುತ್ತಿರುವುದು ಸಾಮಾನ್ಯವಾಗಿ ನಷ್ಟ ಆದರೆ ಅವನ ಅದೃಷ್ಟ ಎನ್ನುವ ಕಾಲ ಇದು. ಆಂಥಾದ್ದರಲ್ಲಿ ಸರ್ಕಾರ ಕೈಲಾದಮಟ್ಟಿಗೆ ಸಹಾಯಕೊಡಬೇಕು ಎನ್ನುವ ದೃಷ್ಟಿ ಇರುವುದರಿಂದ ಸಾವಿರಾರು ಕೇಸ್‌ಗಳು ಪ್ರತಿವರ್ಷ ನಡೆದರೆ ನಷ್ಟವಾಗತಕ್ಕಂಥ ಪರಿಹಾರವನ್ನು ಒದಗಿಸುವುದು ಕಷ್ಟ ಆದುದರಿಂದ ಐದು ನೂರು ರೂಪಾಯಿ ಪರಿಮಿತಿ ನಾವು ಗೊತ್ತುಮಾಡಿರುವುದು.

ಶ್ರೀ ಕೋಣಂದೂರು ಲಿಂಗಪ್ಪ.—ಮನೆ ಸ್ಯೆಟು 15 ದಿವಸದೊಳಗಾಗಿ ಪರಿಹಾರ ಸಿಕ್ಕುವ ಹಾಗೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೂಡಲೇ ಪರಿಹಾರ ಕೊಡಬೇಕು ಎಂದು ಮೊದಲು 25ರೂ. ಕೊಡಬೇಕೆಂದು ಇತ್ತು ಅದನ್ನು ಈಗ ಐದುನೂರು ರೂಪಾಯಿವರೆಗೆ ಕೊಡಬೇಕೆಂದು ನಿಷ್ಪಷ್ಟವಾಗಿ ತಿಳಿಸಿದ್ದೇವೆ.

Sri ABDUL KHUDDUS ANWAR.—The Government used to supply free timber to fire victims. Will the Government consider doing that ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವಿಷಯದಲ್ಲಿ ಮೆಟೀರಿಯಲ್ಸ್ ಎಷ್ಟು ಕೊಡಬೇಕು ಎಂದು ಸರ್ಕಾರದ ಆಜ್ಞೆ ಇದೆ. ಎಷ್ಟು ಕೊಡುವ ಹಾಗೆ ತಿಳಿಸುತ್ತೇನೆ.

Compensation to Land Owners of Savanur Taluk

265. Sri M. M. NADAF (Shiggaon).—

Will the Minister for Public Works and Electricity be pleased to state.—

(*a*) whether the Government is aware that large number of lands have been acquired for the purpose of construction of tank at Hullikoppi and Terumalihalli villages of Savanur Taluk of Dharwar District;

(*b*) whether it is a fact that even though the lands were acquired 5 to 6 years back the land owners are not paid the compensation amount till today;

(*c*) if so, the steps the Government have taken to pay the compensation to the land owners who have lost their lands ?

Sri H. M. CHANNABASAPPA (Minister for Public Works and Electricity).—

(*a*) Yes. The acquisition proceedings are in progress.

(*b*) The compensation amount has not been paid since the awards in Land acquisition proceedings have not been declared.

(*c*) Action has been taken to expedite eompletion of the land acquisition proceedings.